# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 1792/2021 ಸಿಡಬ್ಲ್ಯೂ: ಪಿಡಬ್ಲ್ಯೂ:

ಪ್ರಮಾಣವಚನ ಬೋಧಿಸಲಾಯಿತು ದಿಃ 05-06-2025

ಹೆಸರು : ರವಿ

ತಂದೆ ಹೆಸರು : ಲೋಕ್ಯಾ ನಾಯಕ್ ಚಿನ್ನಾ ರಾಥೋಡ್

ವಯಸ್ಸು : 31 ವರ್ಷ

ಉದ್ಯೋಗ : ಚಾಲಕ

ವಾಸಸ್ಥಳ : ಬಟಗೇರಾ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಆರೋಪಿ ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ನಾನು ಆರೋಪಿತರಿಗೆ ಎಲ್ಲಿಯಾ ನೋಡಿಲ್ಲ ಹಾಗೂ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀಸವಾಲುಃ** ಮಾನ್ಯ ಸ.ಸ.ಅ ರವರಿಂದ:

ದಿಃ21-04-2021 ರಂದು ಬೆಳಿಗ್ಗೆ 11-45 ಗಂಟೆ ಸುಮಾರಿಗೆ ಸೇಡಂ ಪಟ್ಟಣದಲ್ಲಿರುವ ಮಹಲಕ್ಷ್ಮಿ ಸ್ಟೀಲ್ ಅಂಗಡಿಯಲ್ಲಿ 10 ರಿಂದ 15 ಜನರು ಸಾರ್ವಜನಿಕರು ಗುಂಪು ಕೂಡಿಕೊಂಡು ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಿಲ್ಲ. ಆ ವೇಳೆಯಲ್ಲಿ ಎಲ್ಲರೂ ತಮ್ಮ ಮುಖಕ್ಕೆ ಮಾಸ್ಕ ಧರಿಸದೆ ಹಾಗೂ ಸಾಮಾಜಿಕ ಅಂತರ ಕಪಾಡಿಕೊಳ್ಳದೆ ವ್ಯಾಪಾರದಲ್ಲಿ ಮಗ್ನ ರಾಗಿದ್ದರು ಎಂದರೆ ಸರಿಯಿಲ್ಲ. ಆಗ ಚಾ ಸಾ 1 ಮತ್ತು ಅವರ ಸಿಬ್ಬಂದಿ ಹೋಗಿ ವಿಚಾರಣೆ ಮಾಡಲಾರಿ ಸದರಿ ಅಂಗಡಿಯ ಮಾಲಿಕನ ಹೆಸರು ಸುರೇಶ್ ತಂದೆ ಅಂಬೋಜಿ ಅಂತಾ ಗೊತ್ತಾಗಿತ್ತು ಎಂದರೆ ಸರಿಯಿಲ್ಲ. ಆರೋಪಿತನು ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿ ಕೋವಿಡ್ -19 ಸಾಂಕ್ರಾಮಿಕ ರೋಗ ಹರಡುತ್ತದೆ ಅಂತಾ ಗೊತ್ತಿದ್ದರೂ ಸಹ ಆರೋಪಿತನು ನಿರ್ಲಕ್ಷತನದಿಂದ ಹಲವಾರು ಗ್ರಾಹಕರನ್ನು ತನ್ನ ಅಂಗಡಿಯಲ್ಲಿ ಗುಂಪು ಗೂಡಿಸಿ ಸರ್ಕಾರದ ಆದೇಶದ ಉಲ್ಲಂಘನೆ ಮಾಡುತ್ತಾರೆ ಎಂದರೆ ಸರಿಯಿಲ್ಲ.

ಆ ಸಮಯದಲ್ಲಿ ನಾನು ಘಟನಾ ಸ್ಥಳದಲ್ಲಿಯೇ ಹಾಜರಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯು2ದ್ದೇನೆ ಎಂದರೆ ಸರಿಯಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ಓದಿ ಹೇಳಲಾಗಿ ಸದರಿ ದಾಖಲಾತಿಯು ಹೇಳಿಕೆ ಆಗಿದ್ದು, ಸಾಕ್ಷಿಯು ಅದರಲ್ಲಿರುವ ವಿಷಗಳನ್ನು ನಿರಾಕರಿಸಿರುವುದರಿಂದ ಸದರಿ ನಿರಾಕರಿಸಿದ ಭಾಗವನ್ನು ನಿಪಿ-1 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**